**ದಿನಾಂಕ 15.12.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ ಶ್ರೀ ಜೆ.ಎ. ವಕೀಲರಿಂದಃ</u>**

1. ನಾನು ದ್ವಿತೀಯ ಪಿ.ಯು.ಸಿ. ವರೆಗೂ ವ್ಯಾಸಾಂಗ ಮಾಡಿದ್ದೇನೆ. ನಮ್ಮ ತಂದೆ ತೀರಿಕೊಂಡು ಸುಮಾರು 16 ವರ್ಷಗಳಾಗಿವೆ. ನನ್ನ ತಂದೆಯ ಹೆಸರು ವೈ.ಸಿ. ನಾಗರಾಜು. ನಾಗರಾಜು ಎನ್ನುವ ಹೆಸರು ಇರುವವರು ನಮ್ಮ ಊರಿನಲ್ಲಿ ಬಹಳಷ್ಟು ಜನ ಇದ್ದಾರೆ ಎಂದರೆ ಸರಿ. ನನ್ನ ತಂದೆಯು ಸಹಿ ಮಾಡಿರುವಂತಹ ದಾಖಲಾತಿಗಳು ನಮ್ಮ ಮನೆಯಲ್ಲಿ ಇವೆ. ಅವುಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. 5-6 ವರ್ಷಗಳಿಂದ ಈ ಕೇಸಿನ ವಿಚಾರ ನನಗೆ ತಿಳಿದಿದೆ, ನಾನು ಪ್ರತಿವಾದಿಗಳ ಮನೆಗೆ ಹೋಗುತ್ತಿದ್ದೆನು. ನೊಂದಾಯಿತವಲ್ಲದ ಪಾಲು ವಿಭಾಗ ಪತ್ರಕ್ಕೆ ನನ್ನ ತಂದೆ ಸಹಿ ಮಾಡದೇ ಇದ್ದರೂ ಸಹ ಪ್ರತಿವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

    ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**